13

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪುಟ್ಟಣ್ಣ, ಶ್ರೀ ರಾಮೋಜಿಗೌಡ ಹಾಗೂ ಶ್ರೀ ಡಿ.ಟಿ.ಶ್ರೀನಿವಾಸ ಇವರುಗಳ ನಿಯಮ 330 ರ ಮೇರೆಗೆ ಕೋರಲಾಗಿರುವ ವಿಷಯವನ್ನು ಉತ್ತರಿಸುವ ಬಗ್ಗೆ.**

**ವಿಷಯ:**

ಕರ್ನಾಟಕ ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ಶೈಕ್ಷಣಿಕ ಗುಣಮಟ್ಟ ಕುಸಿಯುತ್ತಿದ್ದು ಪ್ರಾಥಮಿಕ ಶಿಕ್ಷಣದಿಂದ ಸ್ನಾತಕೋತ್ತರದವರೆಗಿನ ಪ್ರತಿ ಹಂತದಲ್ಲಿಯೂ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ಶೈಕ್ಷಣಿಕ ಮೂಲಭೂತ ಸೌಲಭ್ಯಗಳು, ಶಿಕ್ಷಕರು ಎದುರಿಸುತ್ತಿರುವ ಸವಾಲುಗಳು ಬೋಧನಾ ಗುಣಮಟ್ಟ ಮತ್ತು ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಗೆ ಪೂರಕವಾದ ವಾತಾವರಣವನ್ನು ಕಲ್ಪಿಸಬೇಕಿದೆ. ಶಿಕ್ಷಣ ಯಾವುದೇ ರಾಷ್ಟ್ರದ ಅಥವಾ ರಾಜ್ಯದ ಅಭಿವೃದ್ಧಿಯ ಅಡಿಪಾಯವಾಗಿದೆ. ಕರ್ನಾಟಕದಲ್ಲಿ ಶೈಕ್ಷಣಿಕ ಗುಣಮಟ್ಟವನ್ನು ವೃದ್ಧಿಸುವ ಸಂಬಂಧ ಸರ್ಕಾರದ ನೀತಿ ನಿಯಮಗಳಲ್ಲಿ ಅಮೂಲಾಗ್ರ ಬದಲಾವಣೆಯ ಅಗತ್ಯತೆ ಇದೆ. ಶೈಕ್ಷಣಿಕ ಕಾನೂನುಗಳಿಗೆ ಬಹಳಷ್ಟು ತಿದ್ದುಪಡಿಯ ಅಗತ್ಯವಿದೆ, ಸರ್ಕಾರದ ನಿಯಮಗಳಲ್ಲಿ ಬದಲಾವಣೆಗಳಾಗಬೇಕಿದೆ ಮತ್ತು ಹೊಸ ಶೈಕ್ಷಣಿಕ ಕಾರ್ಯಯೋಜನೆಗಳನ್ನು ಅನುಷ್ಠಾನಗೊಳಿಸುವ ಅಗತ್ಯತೆ ಇದೆ. ಅದುದರಿಂದ "ಕರ್ನಾಟಕದಲ್ಲಿ ಶೈಕ್ಷಣಿಕ ಗುಣಮಟ್ಟ- ಸಮಸ್ಯೆಗಳು ಮತ್ತು ಸವಾಲುಗಳು" ಎನ್ನುವ ವಿಷಯದ ಬಗ್ಗೆ ಸುದೀರ್ಘವಾಗಿ ಚರ್ಚಿಸಲು ನಿಯಮ 330ದಲ್ಲಿ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರಲ್ಲಿ ಪ್ರಸ್ತಾಪಿಸುತ್ತೇವೆ.

**ಉತ್ತರ:**

ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಶಾಲೆ ಒಂದು ಪರಿಣಾಮಕಾರಿ ವೇದಿಕೆ. ಮಗುವಿನ ಕಲಿಕೆ ಪರಿಣಾಮಕಾರಿ ಹಾಗೂ ಗುಣಮಟ್ಟದಿಂದ ಕೂಡಿದ್ದಾಗ ಮಾತ್ರ ಸರ್ವತೋಮುಖ ಅಭಿವೃದ್ಧಿ ಸಾಧ್ಯ. 2025-26ನೇ ಸಾಲಿನಲ್ಲಿ ಪರಿಣಾಮಕಾರಿಯಾದ ಮತ್ತು ರಚನಾತ್ಮಕವಾದ ಚಟುವಟಿಕೆಗಳನ್ನು ಸಂಘಟಿಸುವುದರೊಂದಿಗೆ ಶೈಕ್ಷಣಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಅನೇಕ ಶೈಕ್ಷಣಿಕ ಚಟುವಟಿಕೆಗಳ ಮುಖಾಂತರ ಕಾರ್ಯಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತರಲಾಗುತ್ತಿದೆ.

**ರಾಜ್ಯದಲ್ಲಿರುವ ಶಾಲೆಗಳ ಸಂಖ್ಯೆ**

| ಶಾಲೆಗಳ ವಿಧ | ಸರ್ಕಾರಿ | ಅನುದಾನಿತ | ಅನುದಾನರಹಿತ |
|---|---|---|---|
| ಕಿರಿಯ ಪ್ರಾಥಮಿಕ | 19603 | 153 | 2124 |
| ಹಿರಿಯ ಪ್ರಾಥಮಿಕ | 21676 | 2361 | 5501 |
| ಪ್ರೌಢಶಾಲೆ | 4895 | 3630 | 8751 |
| **ಒಟ್ಟು** | **46174** | **6144** | **16376** |

## ದಾಖಲಾತಿ ವಿವರ

| ಸರ್ಕಾರಿ ಶಾಲೆಗಳ ವಿಧ | ಒಟ್ಟು ಶಾಲೆಗಳ ಸಂಖ್ಯೆ | 2024-25ನೇ ಸಾಲಿನ ದಾಖಲಾತಿ | 2025-26ನೇ ಸಾಲಿನ ದಾಖಲಾತಿ |
|---|---|---|---|
| ಕಿರಿಯ ಪ್ರಾಥಮಿಕ | 19,603 | 21,97,880 | 20,44,356 |
| ಹಿರಿಯ ಪ್ರಾಥಮಿಕ | 21,676 | 12,19,329 | 11,73,170 |
| ಪ್ರೌಢಶಾಲೆ | 4,895 | 6,57,316 | 6,02,867 |
| **ಒಟ್ಟು** | **46,174** | **40,74,525** | **38,20,393** |

## ಪದವಿ ಪೂರ್ವ ಕಾಲೇಜುಗಳ ಸಂಖ್ಯೆ

| ಸರ್ಕಾರಿ | ಅನುದಾನಿತ | ಅನುದಾನರಹಿತ | ಒಟ್ಟು |
|---|---|---|---|
| 1,319 | 815 | 3,623 | **5,757** |

## ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ದಾಖಲಾತಿ

| ವರ್ಷ | ಪ್ರಥಮ ಪಿ ಯು | ದ್ವಿತೀಯ ಪಿ ಯು | ಒಟ್ಟು |
|---|---|---|---|
| 2024-25 | 1,61,489 | 1,52,375 | **3,13,864** |
| 2025-26 | 1,35,579 | 1,39,392 | **2,74,971** |

ಮೇಲ್ಕಂಡ ಕೋಷ್ಟಕಗಳಂತೆ ಸರ್ಕಾರಿ ಶಾಲೆಗಳ ಸಂಖ್ಯೆ ಖಾಸಗಿ ಶಾಲೆಗಳ ಸಂಖ್ಯೆಗಿಂತ ಗಣನೀಯವಾಗಿ ಹೆಚ್ಚಾಗಿದ್ದು, ರಾಜ್ಯದಲ್ಲಿರುವ ಒಟ್ಟಾರೆ ಶಾಲೆಗಳಲ್ಲಿ ಸರ್ಕಾರಿ ಶಾಲೆಗಳ ಸಂಖ್ಯೆ ಶೇ.67.20 ರಷ್ಟಿರುತ್ತದೆ. ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 2025-26ನೇ ಸಾಲಿನ ದಾಖಲಾತಿಯು 2024-25ನೇ ಸಾಲಿನ ದಾಖಲಾತಿಗಿಂತ ಸುಮಾರು 2.54 ಲಕ್ಷ ವಿದ್ಯಾರ್ಥಿಗಳು ಕಡಿಮೆಯಾಗಿರುವುದನ್ನು ಗಮನಿಸಬಹುದಾಗಿರುತ್ತದೆ. ಸರ್ಕಾರಿ ಶಾಲೆಗಳಲ್ಲಿ ದಾಖಲಾತಿಯು ಕಳೆದ ಶೈಕ್ಷಣಿಕ ಸಾಲಿಗಿಂತ ಪ್ರಸ್ತುತ ಸಾಲಿನಲ್ಲಿ ಶೇ.6.23 ರಷ್ಟು ಕುಸಿತಗೊಂಡಿರುತ್ತದೆ.

## ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳು

ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳಾದ ಶಾಲಾ ಕೊಠಡಿ ನಿರ್ಮಾಣ, ದುರಸ್ತಿ, ಶೌಚಾಲಯ ನಿರ್ಮಾಣವನ್ನು ಅನುದಾನದ ಲಭ್ಯತೆಯನ್ನಾಧರಿಸಿ, ಅವಶ್ಯಕತೆ ಇರುವ ಕಡೆ ಆದ್ಯತೆ ಮೇರೆಗೆ ಹಂತ-ಹಂತವಾಗಿ ಒದಗಿಸಲು ಕ್ರಮ ವಹಿಸಿದ್ದು, 2025-26ನೇ ಸಾಲಿಗೆ ಸರ್ಕಾರಿ ಶಾಲೆಗಳಲ್ಲಿ ಕೊಠಡಿಗಳ ನಿರ್ಮಾಣ, ದುರಸ್ತಿ, ಶೌಚಾಲಯ ನಿರ್ಮಾಣ ಹಾಗೂ ಶೌಚಾಲಯ ಮತ್ತು ಇತರೆ ನಿರ್ವಹಣೆಗಾಗಿ ಆಯವ್ಯಯದಲ್ಲಿ ಈ ಕೆಳಗಿನಂತೆ ಅನುದಾನ ನಿಗದಿಯಾಗಿರುತ್ತದೆ.

| ರೂ.ಲಕ್ಷಗಳಲ್ಲಿ | | |
|---|---|---|
| ಕ್ರ.ಸಂ | ಯೋಜನೆ/ಕಾರ್ಯಕ್ರಮ | ನಿಗದಿಯಾದ ಅನುದಾನ |
| 1 | ಕೊಠಡಿ ನಿರ್ಮಾಣ | 39952.57 |
| 2 | ಕೊಠಡಿ ದುರಸ್ತಿ | 10000.00 |
| 3 | ಶೌಚಾಲಯ ನಿರ್ಮಾಣ | 9000.00 |
| 4 | ಶೌಚಾಲಯ ಮತ್ತು ಇತರ ನಿರ್ವಹಣೆಗಾಗಿ | 5329.00 |
| 5 | ಪೀಠೋಪಕರಣ | 5000.00 |
| | **ಒಟ್ಟು** | **69281.57** |

- ಸರ್ಕಾರಿ ಶಾಲೆಗಳಿಗೆ ಶೌಚಾಲಯ ನಿರ್ವಹಣೆಗಾಗಿ ಅನುದಾನ ಮಂಜೂರಾಗಿದ್ದು, ಸದರಿ ಅನುದಾನದಲ್ಲಿ ಸ್ವಚ್ಛತೆಗಾಗಿ ಸಿಬ್ಬಂದಿಗಳನ್ನು ಸ್ಥಳೀಯವಾಗಿ SDMC ವತಿಯಿಂದ ನೇಮಕ ಮಾಡಿಕೊಂಡು ಸ್ವಚ್ಛತಾ ಕಾರ್ಯನಿರ್ವಹಿಸಲಾಗುತ್ತಿದೆ. ವಿದ್ಯಾರ್ಥಿಗಳ ದಾಖಲಾತಿಗೆ ಅನುಗುಣವಾಗಿ ಕನಿಷ್ಠ ರೂ.9,250/- ಘಟಕ ವೆಚ್ಚ ಮತ್ತು ಗರಿಷ್ಠ ರೂ.22,500/-ಗಳ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.
- ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳಿಗೆ ಮೂಲಭೂತ ಸೌಕರ್ಯ ಒದಗಿಸುವುದು ಆಯಾ ಶಾಲಾ ಆಡಳಿತ ಮಂಡಳಿಯ ಜವಾಬ್ದಾರಿಯಾಗಿದ್ದು ಸರ್ಕಾರದಡಿಯಲ್ಲಿ ಮೂಲಭೂತ ಸೌಕರ್ಯಗಳನ್ನು ನೀಡಲು ಅವಕಾಶವಿರುವುದಿಲ್ಲ.
- ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ಕರ್ನಾಟಕ ಶಿಕ್ಷಣ ಕಾಯ್ದೆ 1983, ಆರ್‌ಟಿಇ ಕಾಯ್ದೆ 2009 ಮತ್ತು ಅದರಡಿಯಲ್ಲಿ ರೂಪಿಸಲಾದ ನಿಯಮಗಳನ್ವಯ ಅಗತ್ಯ ಮೂಲಭೂತ ಸೌಕರ್ಯಗಳಿರುವುದನ್ನು ಪರಿಶೀಲಿಸಿ ಖಚಿತ ಪಡಿಸಿಕೊಳ್ಳಲಾಗುತ್ತಿದೆ.

## ಶೈಕ್ಷಣಿಕ ಗುಣಮಟ್ಟ ಸುಧಾರಣೆ

ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿಯನ್ನು ಉತ್ತಮಪಡಿಸಿ ಶೈಕ್ಷಣಿಕ ಗುಣಮಟ್ಟವನ್ನು ಗಣನೀಯವಾಗಿ ಹೆಚ್ಚಿಸಲು ವಿವಿಧ ಶೈಕ್ಷಣಿಕ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲಾಗಿದೆ.

ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ ಸರ್ಕಾರಿ ಶಾಲಾ-ಕಾಲೇಜುಗಳಲ್ಲಿ ಶೈಕ್ಷಣಿಕ ಗುಣಮಟ್ಟ ಸುಧಾರಣೆಗಾಗಿ ಕೇಂದ್ರ ಸರ್ಕಾರದ ಪಿ.ಎ.ಬಿ ಅನುಮೋದನೆಯಂತೆ ಪ್ರಾಥಮಿಕ ಶಿಕ್ಷಣಕ್ಕೆ ರೂ.148026.85 ಲಕ್ಷಗಳು , ಪ್ರೌಢ ಶಿಕ್ಷಣಕ್ಕೆ ರೂ.36097.52 ಲಕ್ಷಗಳು ಮತ್ತು ಶಿಕ್ಷಕರ ಶಿಕ್ಷಣಕ್ಕೆ ರೂ.4605.36 ಲಕ್ಷಗಳು, ಒಟ್ಟಾರೆ ರೂ.188729.73 ಲಕ್ಷಗಳ ಅನುದಾನ ನಿಗದಿಯಾಗಿರುತ್ತದೆ. ಸದರಿ ಅನುದಾನದಲ್ಲಿ ಶೇ.60 ರಷ್ಟು ಕೇಂದ್ರ ಸರ್ಕಾರದ ಪಾಲು ಮತ್ತು ಶೇ.40 ರಷ್ಟು ರಾಜ್ಯ ಸರ್ಕಾರದ ಪಾಲು ಇರುತ್ತದೆ.

ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ ಸರ್ಕಾರಿ ಶಾಲೆಗಳಲ್ಲಿ ಶೈಕ್ಷಣಿಕ ಗುಣಮಟ್ಟ ಸುಧಾರಣೆಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ.

- ಪೂರ್ವ ಪ್ರಾಥಮಿಕ ಶಿಕ್ಷಣ: 2019-20ನೇ ಸಾಲಿನಿಂದ ಪ್ರಾಥಮಿಕ ಶಾಲೆಯ ದಾಖಲಾತಿ ಹೆಚ್ಚಿಸುವ ಸಲುವಾಗಿ ಹಾಗೂ ಪ್ರಾಥಮಿಕ ಶಿಕ್ಷಣಕ್ಕೆ ಮಕ್ಕಳನ್ನು ಸಿದ್ಧಗೊಳಿಸಲು ಸರ್ಕಾರಿ

ಪ್ರಾಥಮಿಕ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣ ವಿಭಾಗವನ್ನು ಪ್ರಾರಂಭಿಸಿ ಕಾರ್ಯನಿರ್ವಹಿಸಲಾಗಿರುತ್ತದೆ. ಪ್ರಸ್ತುತ 2,619 ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳು ನಡೆಯುತ್ತಿವೆ.

2020-21ನೇ ಸಾಲಿನಲ್ಲಿ 1,184 ಪೂರ್ವ ಪ್ರಾಥಮಿಕ ತರಗತಿಗಳಿಗೆ LKG ಪಠ್ಯಕ್ರಮ ಆಧಾರಿತ ಕಲಿಕೋಪಕರಣ ಕಿಟ್ ಹಾಗೂ 940 ಶಾಲೆಗಳಿಗೆ 2022-23 ರಲ್ಲಿ UKG ಪಠ್ಯಕ್ರಮ ಆಧಾರಿತ ಕಲಿಕೋಪಕರಣ ಕಿಟ್‌ಗಳನ್ನು ರೂ.89.00 ಲಕ್ಷಗಳ ವೆಚ್ಚದಲ್ಲಿ ಶಾಲೆಗಳಿಗೆ ಒದಗಿಸಲಾಗಿರುತ್ತದೆ.

2025-26ನೇ ಸಾಲಿನಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಒಟ್ಟು 5,000 ಶಾಲೆಗಳಿಗೆ ವಿಸ್ತರಿಸಲು ಕ್ರಮಕೈಗೊಳ್ಳಲಾಗುತ್ತಿದೆ.

- ನಲಿ-ಕಲಿ: 2008 ರಿಂದ ಚಟುವಟಿಕೆ/ಆಟ ಆಧಾರಿತ ನಲಿ-ಕಲಿ ಪದ್ಧತಿ ಜಾರಿಯಲ್ಲಿದೆ. ಸರ್ಕಾರಿ ಶಾಲೆಗಳ 1 ರಿಂದ 3ನೇ ತರಗತಿಗಳಲ್ಲಿ ನಲಿ-ಕಲಿ ಬೋಧನಾ ಕಲಿಕಾ ಪದ್ಧತಿಯು ಸ್ವ-ಕಲಿಕೆ, ಸ್ವ-ವೇಗದ ಕಲಿಕೆ ಮತ್ತು ಸ್ವ-ಮೌಲ್ಯಮಾಪನ ಹಾಗೂ ಸಂತಸದಾಯಕ ಕಲಿಕೆಯ ತತ್ವಗಳನ್ನು ಒಳಗೊಂಡಿದೆ. ಈ ಕಲಿಕೆಯ ತತ್ವಗಳಿಗೆ ಪೂರಕವಾಗಿ ಶಿಕ್ಷಣ ತಜ್ಞರ ಸಲಹೆಯಂತೆ 2022-23ನೇ ಸಾಲಿನಲ್ಲಿ ಕನ್ನಡ ಮಾಧ್ಯಮದ 48,933 ಶಾಲೆಗಳು ಹಾಗೂ ಉರ್ದು ಮಾಧ್ಯಮದ 3,817 ಶಾಲೆಗಳಿಗೆ ರೂ.1985.88 ಲಕ್ಷಗಳ ವೆಚ್ಚದಲ್ಲಿ ಕಲಿಕಾ ಸಾಮಗ್ರಿಗಳನ್ನು ಸಿದ್ಧಪಡಿಸಿ ಎಲ್ಲಾ ಶಾಲೆಗಳಿಗೂ ಒದಗಿಸಲಾಗಿದೆ.

  2025-26ನೇ ಸಾಲಿಗೆ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ (FLN) ಚಟುವಟಿಕೆಗಳಿಗೆ ರೂ.8237.47 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ.

- ದ್ವಿ-ಭಾಷಾ ಮಾಧ್ಯಮ: 2019-20ನೇ ಸಾಲಿನಿಂದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ದ್ವಿಭಾಷಾ ಮಾಧ್ಯಮದ ತರಗತಿಗಳನ್ನು ಪ್ರಾರಂಭಿಸಲಾಗಿದ್ದು, ಪ್ರಸ್ತುತ 4,404 ದ್ವಿಭಾಷಾ ಮಾಧ್ಯಮದ ತರಗತಿಗಳನ್ನು ನಡೆಸಲಾಗುತ್ತಿದೆ.
- 2023-24ನೇ ಸಾಲಿನಲ್ಲಿ 2,410 ಶಾಲೆಗಳಿಗೆ ಪ್ರತಿ ಶಾಲೆಗೆ ಒಂದರಂತೆ Reading Enhancement Kit ಗಳನ್ನು ಒಟ್ಟು ರೂ. 53.09 ಲಕ್ಷಗಳ ವೆಚ್ಚದಲ್ಲಿ ಒದಗಿಸಲಾಗಿದೆ.
- 2024-25ನೇ ಸಾಲಿನಲ್ಲಿ ಕನ್ನಡ ಮಾಧ್ಯಮದ 49,380 ಹಾಗೂ ಉರ್ದು ಮಾಧ್ಯಮದ 4,134 ಶಾಲೆಗಳಿಗೆ ಹಾಗೂ ಕನ್ನಡ ಮಾಧ್ಯಮದ ಶಾಲೆಗಳ 12,588 ದ್ವಿ-ಭಾಷಾ ಮಾಧ್ಯಮ ತರಗತಿಗಳಿಗೆ ಹಾಗೂ ಉರ್ದು ಮಾಧ್ಯಮದ ಶಾಲೆಗಳ 1,200 ದ್ವಿ-ಭಾಷಾ ಮಾಧ್ಯಮ ತರಗತಿಗಳಿಗೆ ಒಟ್ಟು ರೂ. 68.00 ಲಕ್ಷ ವೆಚ್ಚದಲ್ಲಿ FLN ವಾಚಕಗಳನ್ನು ಸಿದ್ಧಪಡಿಸಿ ಎಲ್ಲಾ ಶಾಲೆಗಳಿಗೂ ಒದಗಿಸಲಾಗುತ್ತಿದೆ.
- ಓದು ಕರ್ನಾಟಕ, ಗಣಿಕ ಕಲಿಕಾ ಆಂದೋಲನ ಹಾಗೂ ವಿಜ್ಞಾನ ಕಲಿಕೆ : 2024-25ನೇ ಸಾಲಿನಲ್ಲಿ 4 ಮತ್ತು 5ನೇ ತರಗತಿಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸ್ವ-ಕಲಿಕೆಗೆ ಬೆಂಬಲಿಸುವಂತಹ 56,443 ಓದು ಕರ್ನಾಟಕ ಕಿಟ್‌ಗಳನ್ನು ರೂ.1219.00 ಲಕ್ಷಗಳ ವೆಚ್ಚದಲ್ಲಿ ಶಾಲೆಗಳಿಗೆ ಸರಬರಾಜು ಮಾಡಲಾಗಿದೆ.

- 4 ಮತ್ತು 5ನೇ ತರಗತಿಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿಜ್ಞಾನ ಕಲಿಕೆಗೆ ನೆರವಾಗುವಂತೆ 2023-24ನೇ ಸಾಲಿನಲ್ಲಿ ಪ್ರತಿ ಶಾಲೆಗೆ ಒಂದರಂತೆ 7,613 ವಿಜ್ಞಾನ ಕಿಟ್‌ಗಳನ್ನು ರೂ.504.97 ಲಕ್ಷಗಳ ವೆಚ್ಚದಲ್ಲಿ ಹಾಗೂ 2024-25ನೇ ಸಾಲಿನಲ್ಲಿ ಪ್ರತಿ ಶಾಲೆಗೆ ಒಂದರಂತೆ 7,500 ಶಾಲೆಗಳಿಗೆ ರೂ.371.00 ಲಕ್ಷಗಳ ವೆಚ್ಚದಲ್ಲಿ ವಿಜ್ಞಾನ ಕಿಟ್‌ಗಳನ್ನು ಒದಗಿಸಲಾಗಿದೆ.
- ಗಣಿತ ಗಣಕ: 2024-25ನೇ ಸಾಲಿನಲ್ಲಿ 93 ಮಹತ್ವಾಕಾಂಕ್ಷಿ ತಾಲ್ಲೂಕುಗಳ 3 ರಿಂದ 5ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಗಣಿತ ವಿಷಯದಲ್ಲಿ ಆಸಕ್ತಿ ಮೂಡಿಸಿ ಗಣಿತದ ಪರಿಕಲ್ಪನೆಗಳನ್ನು ಸುಲಭವಾಗಿ ಕಲಿಯುವಂತೆ ಗಣಿತ ಗಣಕ ಕಾರ್ಯಕ್ರಮ ನಡೆಸಲಾಗಿದ್ದು ಪ್ರಸ್ತುತ ಈ ಕಾರ್ಯಕ್ರಮವನ್ನು ರಾಜ್ಯಾದ್ಯಾಂತ ವಿಸ್ತರಿಸಲಾಗಿದೆ.

  2025-26ನೇ ಸಾಲಿನಲ್ಲಿ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಗಣಿತ ಗಣಕ ಕಾರ್ಯಕ್ರಮಕ್ಕೆ ರೂ.600.00 ಲಕ್ಷಗಳ ಅನುದಾನ ನಿಗದಿಪಡಿಸಿ ಅನುಷ್ಠಾನಗೊಳಿಸಲಾಗುತ್ತಿದೆ.
- ಮರುಸಿಂಚನ: 2024-25ನೇ ಸಾಲಿನಲ್ಲಿ 93 ಮಹತ್ವಾಕಾಂಕ್ಷಿ ತಾಲ್ಲೂಕುಗಳ 6 ರಿಂದ 10ನೇ ತರಗತಿಯ 8,85,135 ವಿದ್ಯಾರ್ಥಿಗಳಿಗೆ ತರಗತಿಗನುಗುಣವಾದ ಕಲಿಕಾ ಫಲಗಳನ್ನು ಸಾಧಿಸಿ 10ನೇ ತರಗತಿ ಪರೀಕ್ಷೆಯನ್ನು ಯಶಸ್ವಿಯಾಗಿ ಸಾಧಿಸುವಂತೆ ಅನುಕೂಲಿಸಲು ಮರುಸಿಂಚನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಯಿತು. ಈ ವಿದ್ಯಾರ್ಥಿಗಳಿಗೆ ರೂ. 2062.54 ಲಕ್ಷಗಳ ವೆಚ್ಚದಲ್ಲಿ ಅಭ್ಯಾಸಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡಲಾಗಿದೆ.

  2025-26ನೇ ಸಾಲಿನಲ್ಲಿ ರಾಜ್ಯಾದ್ಯಾಂತ ಕಲಿಕೆಯಲ್ಲಿ ಹಿಂದುಳಿದ 6 ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಮರುಸಿಂಚನಾ ಕಾರ್ಯಕ್ರಮವನ್ನು ನಡೆಸಲು ಯೋಜಿಸಲಾಗಿದೆ.
- ಘನಸ್ವರೂಪದ ಕಲಿಕೋಪಕರಣಗಳು : 1 ರಿಂದ 5ನೇ ತರಗತಿಯ ವಿದ್ಯಾರ್ಥಿಗಳಿಗೆ ಕಲಿಕೆಯನ್ನು ಸಂತಸದಾಯಕವಾಗಿ ಹಾಗೂ ಅನುಭವಾತ್ಮಕವಾಗಿ ಮಾಡುವ ದೃಷ್ಟಿಯಿಂದ 2023-24ನೇ ಸಾಲಿನಲ್ಲಿ ಅನುಮೋದನೆಯಾದ ಅನುದಾನದಡಿ 2024-25ನೇ ಸಾಲಿನಲ್ಲಿ 42,265 ಶಾಲೆಗಳಿಗೆ ಪ್ರತಿ ಶಾಲೆಗೆ ಒಂದರಂತೆ ಘನಸ್ವರೂಪದ ಕಲಿಕೋಪಕರಣದ ಕಿಟ್‌ನ್ನು ರೂ.2244.27 ಲಕ್ಷಗಳ ವೆಚ್ಚದಲ್ಲಿ ಸರಬರಾಜು ಮಾಡಲಾಗಿದೆ.
- ವಿದ್ಯಾವಿಕಾಸ ಯೋಜನೆಯಡಿ ಸರ್ಕಾರಿ ಶಾಲೆಗಳ 4 ರಿಂದ 9ನೇ ತರಗತಿಯ ವಿದ್ಯಾರ್ಥಿಗಳಿಗೆ 2024-25ನೇ ಸಾಲಿಗೆ ಅನ್ವಯವಾಗುವಂತೆ, ಕನ್ನಡ, ಇಂಗ್ಲೀಷ್ ಮತ್ತು ಗಣಿತ ವಿಷಯಗಳ ಅಭ್ಯಾಸ ಪುಸ್ತಕಗಳನ್ನು ಸಿದ್ಧಪಡಿಸಿ ಶಾಲೆಗಳಿಗೆ ಸರಬರಾಜು ಮಾಡಲಾಗಿದೆ ಹಾಗೂ ತರಗತಿ ಪ್ರಕ್ರಿಯೆಯಲ್ಲಿ ಬಳಸಿಕೊಳ್ಳಲು ಮಾರ್ಗದರ್ಶನ ನೀಡಿದೆ.
- ತಂತ್ರಜ್ಞಾನ ಬೆಂಬಲಿತ ಕಲಿಕಾ ಕಾರ್ಯಕ್ರಮ: ತಂತ್ರಜ್ಞಾನ ಬಳಸಿ ಬೋಧನೆ ಮಾಡುವ ಸಲುವಾಗಿ 2021-22ನೇ ಸಾಲಿನಲ್ಲಿ 764 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕಂಪ್ಯೂಟರ್ ಲ್ಯಾಬ್ ಸ್ಥಾಪಿಸಲು ಕಂಪ್ಯೂಟರ್ ಖರೀದಿಗಾಗಿ ಪ್ರತಿ ಶಾಲೆಗೆ ರೂ. 6.40 ಲಕ್ಷದ ವೆಚ್ಚದಲ್ಲಿ ಒಟ್ಟು ರೂ.4889.60 ಲಕ್ಷಗಳನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದ್ದು ಪ್ರಗತಿಯಲ್ಲಿರುತ್ತದೆ.

2024-25ನೇ ಸಾಲಿನಲ್ಲಿ 120 ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಂಪ್ಯೂಟರ್ ಲ್ಯಾಬ್ ಸ್ಥಾಪಿಸಲು ಕಂಪ್ಯೂಟರ್ ಖರೀದಿಗಾಗಿ ಪ್ರತಿ ಶಾಲೆಗೆ ರೂ. 6.40 ಲಕ್ಷದ ವೆಚ್ಚದಲ್ಲಿ ಒಟ್ಟು ರೂ.768.00 ಲಕ್ಷಗಳನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದ್ದು ಪ್ರಗತಿಯಲ್ಲಿರುತ್ತದೆ. 239 ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಂಪ್ಯೂಟರ್ ಲ್ಯಾಬ್ ಸ್ಥಾಪಿಸಲು ಕಂಪ್ಯೂಟರ್ ಖರೀದಿಗಾಗಿ ಪ್ರತಿ ಶಾಲೆಗೆ ರೂ. 4.50 ಲಕ್ಷದ ವೆಚ್ಚದಲ್ಲಿ ಒಟ್ಟು ರೂ.1075.50 ಲಕ್ಷಗಳನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದ್ದು ಪ್ರಗತಿಯಲ್ಲಿರುತ್ತದೆ.

2025-26ನೇ ಸಾಲಿನಲ್ಲಿ 500 ಶಾಲೆಗಳಲ್ಲಿ ಕಂಪ್ಯೂಟರ್ ಮತ್ತು ವಿಜ್ಞಾನ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗುತ್ತಿದೆ.

- 2022-23ನೇ ಸಾಲಿನಲ್ಲಿ 137 ಪದವಿಪೂರ್ವ ಕಾಲೇಜುಗಳಿಗೆ ಸ್ಮಾರ್ಟ್ ಕ್ಲಾಸ್ ರೂಮ್ ಸ್ಥಾಪನೆಗೆ ಘಟಕ ವೆಚ್ಚ ರೂ.2.40 ಲಕ್ಷದಂತೆ ಒಟ್ಟು ರೂ.328.8 ಲಕ್ಷ ಅನುಮೋದನೆಯಾಗಿದ್ದು ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ.
- ಪ್ರಯೋಗಾಲಯಗಳ ಉನ್ನತೀಕರಣ: 2024-25 ನೇ ಸಾಲಿನಲ್ಲಿ ರಾಜ್ಯದ ವಿಜ್ಞಾನ ಸಂಯೋಜನೆ ಹೊಂದಿರುವ 614 ಸರ್ಕಾರಿ ಪದವಿ-ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ವಿಜ್ಞಾನ ಪ್ರಯೋಗಾಲಯಗಳನ್ನು ರೂ.952.50 ಲಕ್ಷಗಳ ಅನುದಾನದಲ್ಲಿ ಉನ್ನತೀಕರಿಸಲಾಗಿದೆ.
- 2022-23ನೇ ಸಾಲಿನಲ್ಲಿ 204 ಕ್ಷೇತ್ರ ಸಂಪನ್ಮೂಲ ಕೇಂದ್ರ (BRC) ಗಳಿಗೆ ಕಂಪ್ಯೂಟರ್ ಲ್ಯಾಬ್ ಸ್ಥಾಪಿಸಲು ಕಂಪ್ಯೂಟರ್ ಖರೀದಿಗಾಗಿ ಪ್ರತಿ BRCಗೆ ರೂ. 6.40 ಲಕ್ಷದ ವೆಚ್ಚದಲ್ಲಿ ಒಟ್ಟು ರೂ.1305.60 ಲಕ್ಷಗಳನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದ್ದು ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ
- ಇನ್ನೋವೇಟೀವ್ ಲ್ಯಾಬ್: ವಿದ್ಯಾರ್ಥಿಗಳ ಕಲ್ಪನೆಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಹಾಗೂ ಅವರಲ್ಲಿ ಆವಿಷ್ಕಾರಾತ್ಮಕ ಮನೋಭಾವನೆಯನ್ನು ವೃದ್ಧಿಸುವಲ್ಲಿ ಸಹಕರಿಸಲು ರಾಜ್ಯದ ಮಹತ್ವಾಕಾಂಕ್ಷಿ ತಾಲ್ಲೂಕುಗಳಲ್ಲಿನ 73 ಕೆ.ಪಿ.ಎಸ್ ಮತ್ತು 50 ಆದರ್ಶ ವಿದ್ಯಾಲಯ ಶಾಲೆಗಳಲ್ಲಿ ಅವಿಷ್ಕಾರ್ ಇನ್ನೋವೇಟೀವ್ ಲ್ಯಾಬ್ ಗಳನ್ನು ರೂ.2000.00 ಲಕ್ಷ ಗಳ ವೆಚ್ಚದಲ್ಲಿ ಸ್ಥಾಪಿಸಲು ಕ್ರಮವಹಿಸಲಾಗಿದೆ.
- ವೃತ್ತಿ ಶಿಕ್ಷಣ: ಪ್ರೌಢ ಶಾಲಾ ವಿದ್ಯಾರ್ಥಿಗಳಲ್ಲಿ ವೃತ್ತಿಪರತೆ ಹಾಗೂ ಔದ್ಯೋಗಿಕತೆಯನ್ನು ಬೆಳೆಸಲು ಆಯ್ದ 375 ಶಾಲೆಗಳಲ್ಲಿ ವೃತ್ತಿ ಶಿಕ್ಷಣವನ್ನು ಒದಗಿಸಲಾಗುತ್ತಿದ್ದು ವಿದ್ಯಾರ್ಥಿಗಳು 6 ಸೆಕ್ಟರ್‌ಗಳ ಅಡಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಪ್ರಸ್ತುತ ಹೆಚ್ಚುವರಿಯಾಗಿ 200 ಪ್ರೌಢಶಾಲೆಗಳಲ್ಲಿ ವೃತ್ತಿ ಶಿಕ್ಷಣವನ್ನುನೀಡಲು ಕ್ರಮವಹಿಸಲಾಗುತ್ತಿದೆ.
- ರಾಜ್ಯದಲ್ಲಿ 585 PMSHRI ಶಾಲೆಗಳಿದ್ದು, 2025-26ನೇ ಸಾಲಿಗೆ ಪಿ.ಎ.ಬಿ. ಅನುಮೋದನೆಯಂತೆ ರೂ. 29771.322 ಲಕ್ಷ ಅನುದಾನ ನಿಗದಿಯಾಗಿರುತ್ತದೆ.

- ರಾಜ್ಯದಲ್ಲಿ ಹೆಣ್ಣುಮಕ್ಕಳ ಶಿಕ್ಷಣ ಉತ್ತೇಜನಕ್ಕಾಗಿ 145 ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯಗಳು, 72 ಕರ್ನಾಟಕ ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯಗಳು ಹಾಗೂ 6-10ನೇ ತರಗತಿಗೆ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ಒದಗಿಸಲು ಆದರ್ಶ ವಿದ್ಯಾಲಯಗಳನ್ನು ಪ್ರಾರಂಭಿಸಲಾಗಿದೆ.

  2025-26 ನೇ ಸಾಲಿನಲ್ಲಿ ಕಸ್ತೂರಬಾ ಬಾಲಿಕಾ ವಿದ್ಯಾಲಯಗಳು ಮತ್ತು ಕರ್ನಾಟಕ ಕಸ್ತೂರಬಾ ಬಾಲಿಕಾ ವಿದ್ಯಾಲಯಗಳ ನಿರ್ವಹಣೆಗೆ ರೂ.8432.28 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ

- ವಿದ್ಯಾವಿಜೇತ ಕಾರ್ಯಕ್ರಮ: ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿಜ್ಞಾನ ಸಂಯೋಜನೆ ಯಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರತಿದಿನ ಆನ್‌ಲೈನ್ ಲೈವ್ ತರಗತಿಗಳನ್ನು (2 ಅವಧಿ) ನಡೆಸಲಾಗುತ್ತಿದೆ. 2024-25 ನೇ ಸಾಲಿನಲ್ಲಿ ಪ್ರಥಮ ಪಿ ಯು 12,500 ವಿದ್ಯಾರ್ಥಿಗಳು ಹಾಗೂ ದ್ವಿತೀಯ ಪಿ ಯು ತರಗತಿಗಳ 12,500 ವಿದ್ಯಾರ್ಥಿಗಳನ್ನು ಪ್ರವೇಶ ಪರೀಕ್ಷೆ ನಡೆಸಿ ಆಯ್ಕೆ ಮಾಡಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿರುತ್ತದೆ.

  2025-26 ನೇ ಸಾಲಿಗೆ 25000 ವಿದ್ಯಾರ್ಥಿಗಳು ಸದರಿ ಕಾರ್ಯಕ್ರಮದ ಉಪಯೋಗ ಪಡೆಯುತ್ತಿದ್ದು, ಸದರಿ ಕಾರ್ಯಕ್ರಮಕ್ಕೆ ರೂ.500.00 ಲಕ್ಷಗಳ ಅನುದಾನ ನಿಗದಿಯಾಗಿರುತ್ತದೆ.

## ಕರ್ನಾಟಕ ಪಬ್ಲಿಕ್ ಶಾಲೆಗಳ ಸ್ಥಾಪನೆ

"ಪ್ರತಿ ಮಗುವೂ ಶಾಲೆಯಲ್ಲಿ ಉತ್ತಮ ಕಲಿಕೆಗಾಗಿ" "ಎಂಬ ನೀತಿಯನ್ವಯ ಅಸ್ತಿತ್ವದಲ್ಲಿರುವ ಶಾಲೆಗಳ ಆಡಳಿತಾತ್ಮಕ, ಶೈಕ್ಷಣಿಕ ಮತ್ತು ಕ್ರಿಯಾತ್ಮಕ ಸಂಯೋಜನೆಯೊಂದಿಗೆ ಪೂರ್ವ ಪ್ರಾಥಮಿಕ ಶಾಲೆಯಿಂದ 12 ನೇ ತರಗತಿವರೆಗೆ ಗುಣಾತ್ಮಕ ಶಿಕ್ಷಣ ನೀಡುವ ಸಲುವಾಗಿ 2018-19ನೇ ಸಾಲಿನಿಂದ 308 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಈ ಶಾಲೆಗಳಲ್ಲಿ ಕನ್ನಡ ಹಾಗೂ ಆಂಗ್ಲ ಮಾಧ್ಯಮ ಬೋಧನಾ ಪದ್ಧತಿಯನ್ನು ಅಳವಡಿಸಲಾಗಿದೆ.

ಈ ಶಾಲೆಗಳನ್ನು ಗುಣಮಟ್ಟದ ಶಿಕ್ಷಣ ನೀಡುವ, ವಿದ್ಯಾರ್ಥಿ ಕೇಂದ್ರಿತ, ಸಮುದಾಯ ಮುಖಿ ಮತ್ತು ಸಮುದಾಯ ಬೆಂಬಲಿತ ಶಾಲೆಗಳನ್ನಾಗಿಸಿ, 'ಉತ್ಕೃಷ್ಟತೆಯ ಕೇಂದ್ರಗಳನ್ನಾಗಿ' (Centre of Excellence) ಪರಿವರ್ತಿಸುವ ಉದ್ದೇಶವಿರುತ್ತದೆ..

2025-26ನೇ ಸಾಲಿನಲ್ಲಿ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ (ADB) ಸಹಯೋಗದೊಂದಿಗೆ 500 ಶಾಲೆಗಳನ್ನು ಹಾಗೂ CSR ಒಳಗೊಂಡಿರುವ ಕಂಪನಿಗಳು ಮತ್ತು ನಾಗರಿಕ ಸಮಾಜ ಸಂಸ್ಥೆಗಳು ಸೇರಿದಂತೆ ವಿವಿಧ ಪಾಲುದಾರಿಕೆಯ ಮೂಲಕ ಖಾಸಗಿ ಸಂಸ್ಥೆಗಳ ಸಹಯೋಗದೊಂದಿಗೆ ರಾಜ್ಯದಲ್ಲಿ 2000 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆರಂಭಿಸಲು ಯೋಜಿಸಿದ್ದು, ಪ್ರಾರಂಭಿಕವಾಗಿ 500 ಕೆ.ಪಿ.ಎಸ್ ಶಾಲೆಗಳನ್ನು ಪ್ರಾರಂಭಿಸಲು ಕ್ರಮವಹಿಸಲಾಗುತ್ತಿದೆ. ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ಮೇಲುಸ್ತುವಾರಿ ಸಮಿತಿಯನ್ನು ರಚಿಸಲಾಗಿದೆ.

2025-26ನೇ ಸಾಲಿನ ಆಯವ್ಯಯ ಭಾಷಣದ ಘೋಷಣೆಯಂತೆ ಕಲ್ಯಾಣ ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳಲ್ಲಿ ಅಕ್ಷರ ಆವಿಷ್ಕಾರ ಯೋಜನೆಯಡಿ ಆಯ್ದ 50 ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳಾಗಿ ಉನ್ನತೀಕರಿಸಲು ರೂ.200.00 ಲಕ್ಷ ಅನುದಾನ ನಿಗದಿಪಡಿಸಲಾಗಿದ್ದು, ಕ್ರಿಯಾಯೋಜನೆ ಸಿದ್ಧಪಡಿಸಲಾಗುತ್ತಿದೆ.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ PMU ಸ್ಥಾಪಿಸಿ ತಾಲ್ಲೂಕುವಾರು ಸಭೆಯಲ್ಲಿ ಚಿಂತನ-ಮಂಥನ ಮಾಡಿ ಆಯದ್ ಶಾಲೆಗಳನ್ನು ಕೆ.ಪಿ.ಎಸ್. ಶಾಲೆಯಾಗಿ ಪರಿವರ್ತಿಸಲು ಕ್ರಮ ಕೈಗೊಂಡಿದ್ದು ಕಾರ್ಯ ಪ್ರಗತಿಯಲ್ಲಿದೆ.

ವಿದ್ಯಾರ್ಥಿಗಳ ಕಲಿಕಾ ಫಲಿತಾಂಶಗಳು ಮತ್ತು ಪರಿವರ್ತನೆಯ ದರಗಳನ್ನು ಹೆಚ್ಚಿಸುವ ಸಲುವಾಗಿ ಗ್ರಾಮೀಣ ಹಾಗೂ ಅನಾನುಕೂಲಕರ ಪ್ರದೇಶಗಳಲ್ಲಿ ಸರ್ಕಾರಿ ಶಾಲೆಗಳನ್ನು ಕೆ.ಪಿ.ಎಸ್. ಶಾಲೆಯಾಗಿ ಪರಿವರ್ತಿಸುವ ಮೂಲಕ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ಈ ಕೆಳಕಂಡಂತೆ ಕ್ರಮವಹಿಸಲಾಗುತ್ತಿದೆ.

- ಶಾಲೆಗಳ ಮೂಲ ಸೌಲಭ್ಯಗಳು, ಸಂಪನ್ಮೂಲಗಳು ಮತ್ತು ಡಿಜಿಟಲ್ ಮೂಲಸೌಕರ್ಯವನ್ನು ನವೀಕರಿಸುವ ಮೂಲಕ, ವಿದ್ಯಾರ್ಥಿಗಳ ಕಲಿಕೆ ಮತ್ತು ಪಠ್ಯಕ್ರಮದ ಪ್ರಸ್ತುತತೆಯನ್ನು ಹೆಚ್ಚಿಸುವ ಮೂಲಕ ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತಮಗೊಳಿಸಲಾಗುತ್ತಿದೆ.
- ಕಲಿಕೆಯನ್ನು ಸುಧಾರಿಸುವುದು, ಶಿಕ್ಷಕರು ಮತ್ತು ಪ್ರಾಂಶುಪಾಲರಿಗೆ ವೃತ್ತಿಪರ ಅಭಿವೃದ್ಧಿಯನ್ನು ಬಲಪಡಿಸಲು ಕ್ರಮವಹಿಸಲಾಗುತ್ತಿದೆ.
- ಶಾಲಾ ನಿರ್ವಹಣೆ ವ್ಯವಸ್ಥೆಯನ್ನು ಬಲಪಡಿಸಿ ಭಾಗೀದಾರರ ಹೊಣೆಗಾರಿಕೆಯನ್ನು ಹೆಚ್ಚಿಸಲು ಕ್ರಮವಹಿಸಲಾಗುತ್ತಿದೆ.
- ಶಾಲೆಗಳಲ್ಲಿ ಶೈಕ್ಷಣಿಕ ಪರಿಸರವನ್ನು ಉತ್ತಮಪಡಿಸಲು ವಿಜ್ಞಾನ ಪ್ರಯೋಗಾಲಯ, ಗ್ರಂಥಾಲಯ, ಕ್ರೀಡಾ ಸೌಲಭ್ಯ, ಹವಾಮಾನ-ನಿರೋಧಕ ಹಸಿರು ಕಟ್ಟಡ ಹಾಗೂ ಡಿಜಿಟಲ್ ಕಲಿಕಾ ಮೂಲಸೌಕರ್ಯಗಳನ್ನು ಒದಗಿಸಲಾಗುತ್ತಿದೆ..
- ವಿದ್ಯಾರ್ಥಿ ಕೇಂದ್ರಿತ ಕಲಿಕೆ, ಹೊಂದಾಣಿಕೆಯ ಕಲಿಕೆ, ರಚನಾತ್ಮಕ ಮೌಲ್ಯಮಾಪನಗಳು ಮತ್ತು ತರಗತಿಗೆ ಹಾಗೂ ವಯೊಮಾನಕ್ಕೆ ತಕ್ಕಂತೆ ಸಾಮರ್ಥ್ಯಗಳನ್ನು ಹೆಚ್ಚಿಸುವತ್ತ ಗಮನಹರಿಸಲಾಗುತ್ತಿದೆ.
- ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳಿಗೆ ಬೆಂಬಲ CWSN ವಿದ್ಯಾರ್ಥಿಗಳಿಗೆ ಚಟುವಟಿಕೆಗಳನ್ನು ವಿಸ್ತರಿಸಲಾಗುತ್ತಿದೆ.
- STEM ಮತ್ತು 21ನೇ ಶತಮಾನದ ಕೌಶಲ್ಯಗಳನ್ನು ಪ್ರೌಢಶಾಲಾ ವಿದ್ಯಾರ್ಥಿಗಳಲ್ಲಿ ಬೆಳೆಸಲು ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಶಿಕ್ಷಕರು ಮತ್ತು ಪ್ರಾಂಶುಪಾಲರ ವೃತ್ತಿ ಕೌಶಲ್ಯಗಳನ್ನು ಬಲಪಡಿಸುವುದು.

- ಪೋಷಕರು ಮತ್ತು ಸಮುದಾಯವನ್ನು ತೊಡಗಿಸಿಕೊಂಡು ಶಾಲಾ ಸುಧಾರಣಾ ಯೋಜನೆ ಕೈಗೊಳ್ಳಲಾಗುತ್ತಿದೆ.
- ವಿದ್ಯಾರ್ಥಿಗಳ ಸಂಖ್ಯೆಗನುಣವಾಗಿ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯದ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ , ಒಂದೇ ಸೂರಿನಡಿ 1-10ನೇ /1-12ನೇ ತರಗತಿಯವರೆಗೆ ಗುಣಮಟ್ಟದ ಶಿಕ್ಷಣ ವಿದ್ಯಾರ್ಥಿಗಳಿಗೆ ದೊರೆಯುವಂತೆ ಮಾಡುವುದರೊಂದಿಗೆ ಶಾಲೆಗಳ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರವು ಕೆ.ಪಿ.ಎಸ್. ಶಾಲೆಯಾಗಿ ಪರಿವರ್ತಿಸುವ ಮೂಲಕ ಗುಣಮಟ್ಟವನ್ನು ಸುಧಾರಿಸಲು ಕ್ರಮವಹಿಸಲಾಗುತ್ತಿದೆ.

## 74 ಆದರ್ಶ ವಿದ್ಯಾಲಯಗಳಲ್ಲಿ ಪದವಿ ಪೂರ್ವ ಕಾಲೇಜುಗಳ ಆರಂಭ

- 2024-25ನೇ ಸಾಲಿನ ಆಯವ್ಯಯ ಘೋಷಿತ ಕಾರ್ಯಕ್ರಮ ಕಂಡಿಕೆ:99(ಎ)ರಂತೆ ರಾಜ್ಯದಲ್ಲಿರುವ 74 ಆದರ್ಶ ವಿದ್ಯಾಲಯಗಳನ್ನು ವಾಣಿಜ್ಯ ಮತ್ತು ವಿಜ್ಞಾನ ವಿಷಯಗಳ ಸಂಯೋಜನೆಯೊಂದಿಗೆ ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸಲಾಗಿದೆ.
- 2024-25ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದಲ್ಲಿರುವ 74 ಆದರ್ಶ ವಿದ್ಯಾಲಯಗಳನ್ನು ವಾಣಿಜ್ಯ ಮತ್ತು ವಿಜ್ಞಾನ ವಿಷಯಗಳ ಗಣಕವಿಜ್ಞಾನ ಸಂಯೋಜನೆಯೊಂದಿಗೆ ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸಿ ಆದರ್ಶ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆ.
- 74 ಆದರ್ಶ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಗಣಕವಿಜ್ಞಾನ ಪ್ರಯೋಗಾಲಯ ಸ್ಥಾಪಿಸಲು TAP specification ಹೊಂದಿರುವ AIO Computers (ಪ್ರತಿ ಕಾಲೇಜಿಗೆ 10 ರಂತೆ) ಖರೀದಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.

## 2025-26ನೇ ಸಾಲಿನಲ್ಲಿ ಗುಣಮಟ್ಟದ ಶಿಕ್ಷಣ ನೀಡಲು ತೆಗೆದುಕೊಂಡ ಕ್ರಮಗಳು

- ಸರ್ಕಾರಿ ಶಾಲೆಗಳಲ್ಲಿ 1-3 ನೇ ತರಗತಿ ಚಟುವಟಿಕೆ ಆಧಾರಿತಾ ನಲಿ-ಕಲಿ ಬೋಧನಾ ಪದ್ಧತಿಯನ್ನು ಅಳವಡಿಸಿಕೊಂಡಿದ್ದು, ಇದು ಬಹುವರ್ಗ ಬೋಧನಾ ವಿಧಾನವಾಗಿರುತ್ತದೆ.
- Ekstep Foundation ಸಂಸ್ಥೆಯ ಸಹಕಾರದೊಂದಿಗೆ ಕೃತಕ ಬುದ್ಧಿಮತ್ತೆ (Artificial Intelligence) ಬಳಸಿಕೊಂಡು ರಾಜ್ಯದ ಆಯ್ದ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ "ಕಲಿಕಾದೀಪ" ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ.
- 2025-26ನೇ ಸಾಲಿನ ಆಯವ್ಯಯ ಭಾಷಣದ ಘೋಷಣೆಯಂತೆ ಗಣಿತ ಗಣಕ ಕಾರ್ಯಕ್ರಮದ ಮೂಲಕ ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ 3-5ನೇ ತರಗತಿಯ ವಿದ್ಯಾರ್ಥಿಗಳಲ್ಲಿ ಗಣಿತ ವಿಷಯದ ಬುನಾದಿ ಗಣಿತ ಕೌಶಲಗಳನ್ನು ವೃದ್ಧಿಸಲು ರೂ.600.00 ಲಕ್ಷಗಳ ಅನುದಾನ ನಿಗದಿಪಡಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

- 2025-26ನೇ ಸಾಲಿನ ಆಯವ್ಯಯ ಭಾಷಣದ ಘೋಷಣೆಯಂತೆ ಓದು ಕರ್ನಾಟಕ ಕಾರ್ಯಕ್ರಮದ ಮೂಲಕ ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ 4 ಮತ್ತು 5ನೇ ತರಗತಿಯ ವಿದ್ಯಾರ್ಥಿಗಳಲ್ಲಿ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ ಕೌಶಲಗಳನ್ನು ವೃದ್ಧಿಸಲು 2024-25ನೇ ಸಾಲಿನ ಅನುದಾನದಲ್ಲಿ ರೂ.1242.84 ಲಕ್ಷಗಳ ಅನುದಾನ ನಿಗದಿಪಡಿಸಿ ಅನುಷ್ಠಾನಗೊಳಿಸಲಾಗುತ್ತಿದೆ.
- ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ 6 ರಿಂದ 10ನೇ ತರಗತಿಯ ವಿದ್ಯಾರ್ಥಿಗಳಲ್ಲಿ ಅತೀ ಕಡಿಮೆ ಕಲಿಕಾ ಸ್ತರದಲ್ಲಿರುವ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸಲು ಮರು ಸಿಂಚನ ಕಾರ್ಯಕ್ರಮವನ್ನು ಅಂದಾಜು ರೂ.974.00 ಲಕ್ಷಗಳ ಅನುದಾನ ನಿಗದಿಪಡಿಸಿ ಅನುಷ್ಠಾನಗೊಳಿಸಲಾಗುತ್ತಿದೆ.
- 2025-26ನೇ ಸಾಲಿನ ಆಯವ್ಯಯ ಭಾಷಣದ ಘೋಷಣೆಯಂತೆ ಖಾನ್ ಅಕಾಡೆಮಿ ಇಂಡಿಯಾ ಸಹಯೋಗದೊಂದಿಗೆ ಸರ್ಕಾರಿ ಶಾಲಾ ಕಾಲೇಜುಗಳ 6 ರಿಂದ 12ನೇ ತರಗತಿಯ ವಿದ್ಯಾರ್ಥಿಗಳಲ್ಲಿ ವಿಜ್ಞಾನ ಮತ್ತು ಗಣಿತ ವಿಷಯಗಳ ಬೋಧನಾ ವಿಧಾನದಲ್ಲಿ ನಾವಿನ್ಯತೆ ಅಳವಡಿಸಲು ಜ್ಞಾನ ಸೇತು ಕಾರ್ಯಕ್ರಮವನ್ನು ರೂ.540.00 ಲಕ್ಷಗಳ ಅನುದಾನ ನಿಗದಿಪಡಿಸಿ ಅನುಷ್ಠಾನಗೊಳಿಸಲಾಗಿದೆ.
- ರಾಜ್ಯದ ಆಯ್ದ ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ 8 ರಿಂದ 12ನೇ ತರಗತಿಯ ವಿದ್ಯಾರ್ಥಿಗಳಲ್ಲಿ ವೃತ್ತಿಪರ ಕೌಶಲಗಳನ್ನು ಉತ್ತೇಜಿಸಲು NSQF ಅಡಿಯಲ್ಲಿ ಆಯ್ದ ಕೋರ್ಸ್‌ಗಳನ್ನು ಕಲಿಯಲು ಅವಕಾಶ ಕಲ್ಪಿಸಲಾಗಿದೆ.
- 2025-26ನೇ ಸಾಲಿನ ಆಯವ್ಯಯ ಭಾಷಣದ ಘೋಷಣೆಯಂತೆ ಪ್ರೌಢ ಶಾಲೆ/ಪದವಿ ಪೂರ್ವ ಹಂತದಲ್ಲಿ ಸರ್ಕಾರಿ ಶಾಲೆ/ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಸರ್ಕಾರಿ ಐ.ಟಿ.ಐ. ಕಾಲೇಜುಗಳ ಸಹಯೋಗದೊಂದಿಗೆ ಕೌಶಲ್ಯ ತರಬೇತಿ ನೀಡಲು Skill at School ಕಾರ್ಯಕ್ರಮವನ್ನು ರೂ.525.00 ಲಕ್ಷಗಳ ಅನುದಾನ ನಿಗದಿಪಡಿಸಿ ಅನುಷ್ಠಾನಗೊಳಿಸಲಾಗುತ್ತಿದೆ.
- 2025-26ನೇ ಸಾಲಿನ ಆಯವ್ಯಯ ಭಾಷಣದ ಘೋಷಣೆಯಂತೆ ಪ್ರಸಕ್ತ ಸಾಲಿನಲ್ಲಿ 500 ಶಾಲೆಗಳಿಗೆ ಕಂಪ್ಯೂಟರ್ ಮತ್ತು ವಿಜ್ಞಾನ ಪ್ರಯೋಗಾಲಯಗಳನ್ನು ರೂ.2500.00 ಲಕ್ಷಗಳ ಅನುದಾನ ನಿಗದಿಪಡಿಸಿ ವಿಸ್ತರಿಸಲು ಕ್ರಮವಹಿಸಲಾಗುತ್ತಿದೆ.
- 2025-26ನೇ ಸಾಲಿನ ಆಯವ್ಯಯ ಭಾಷಣದ ಘೋಷಣೆಯಂತೆ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಕೋಡಿಂಗ್ ಕಲಿಕೆ ಪರಿಚಯಿಸಲು ಅಗಸ್ತ್ಯ ಫೌಂಡೇಷನ್ ಸಹಯೋಗದೊಂದಿಗೆ ರೂ.315.00 ಲಕ್ಷ ಅನುದಾನ ನಿಗದಿಪಡಿಸಿ ಐ-ಕೋಡ್ ಲ್ಯಾಬ್ ಸ್ಥಾಪಿಸಲು ಉದ್ದೇಶಿಸಲಾಗಿದೆ.
- 2024-25ನೇ ಸಾಲಿನಲ್ಲಿ ಆಯವ್ಯಯ ಘೋಷಿಕ ಕಂಡಿಕೆ 96(ಡಿ) ಅಡಿ 250 ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿಜ್ಞಾನ ಪ್ರಯೋಗಾಲಯ ಸೌಲಭ್ಯವನ್ನು ಅನುಷ್ಠಾನಿಸಿ ಪ್ರಯೋಗಾಲಯ ನಿರ್ವಹಣೆ ಕುರಿತು ಪ್ರಯೋಗದರ್ಶಿ ಎಂಬ ಕೈಪಿಡಿಯನ್ನು ಸಿದ್ಧಪಡಿಸಿ ಸಂಬಂಧಿಸಿದ ಶಾಲೆಗಳ ವಿಜ್ಞಾನ ಶಿಕ್ಷಕರಿಗೆ ತರಬೇತಿ ನೀಡಲಾಗಿದೆ.
- ಸಂಭ್ರಮ ಶನಿವಾರ (No Bag Day) ಕಾರ್ಯಕ್ರಮವನ್ನು ಬ್ಯಾಗ್ ಹೊರೆ ತಗ್ಗಿಸಲು ಹಾಗೂ ಸಹ ಪಠ್ಯ ಚಟುಟಿಕೆಗಳ ಮೂಲಕ ಮಕ್ಕಳಲ್ಲಿ ನಾಗರೀಕ ಪ್ರಜ್ಞೆಯನ್ನು ಮೂಡಿಸಲು ಮತ್ತು ವೃತ್ತಿ ಕೌಶಲವನ್ನು

ಅಭಿವೃದ್ಧಿಪಡಿಸುವ ಉದ್ದೇಶದಿಂದ ರಾಜ್ಯದ ಎಲ್ಲಾ ಶಾಲೆಗಳಲ್ಲಿ 10 ದಿನಗಳ ಬ್ಯಾಗ್ ರಹಿತ ದಿನಗಳನ್ನು ಆಚರಿಸಲಾಗುತ್ತಿದೆ.

- 1 ರಿಂದ 8ನೇ ತರಗತಿಯವರೆಗೆ ಪಾಠ ಆಧಾರಿತ ಚಿತ್ರ ಸಹಿತ ದ್ವಿಭಾಷಾ ನಿಘಂಟು ಸಿದ್ಧಪಡಿಸಿ (Bilingual Dictionary) 100 ಶಾಲೆಗಳಲ್ಲಿ Pilot ಮಾಡಲಾಗುತ್ತಿದೆ.
- 2025-26 ನೇ ಸಾಲಿನಲ್ಲಿ FLN ಅನ್ನು ಇನ್ನೂ ಉತ್ತಮ ರೀತಿಯಲ್ಲಿ ಅನುಷ್ಠಾನ ಮಾಡುವ ಸಂಬಂಧ NCERT ಯಿಂದ ಆರಂಭಿಕ ಸಾಕ್ಷರತೆಗೆ 09 ಹಾಗೂ ಸಂಖ್ಯಾಜ್ಞಾನಕ್ಕೆ 08 ಕಲಿಕಾ ಫಲಗಳನ್ನು ಒಳಗೊಂಡಂತೆ, ಪರಿಷ್ಕೃತ 17 ಕಲಿಕಾ ಫಲಗಳನ್ನು ರೂಪಿಸಲಾಗಿದೆ.
- ವಿದ್ಯಾವಿಜೇತ ಕಾರ್ಯಕ್ರಮ: ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿಜ್ಞಾನ ಸಂಯೋಜನೆ ಯಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರತಿದಿನ Online Live ತರಗತಿಗಳನ್ನು (2 ಅವಧಿ) ನಡೆಸಲಾಗುತ್ತಿದೆ.
- ಆಯ್ದ 100 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಗಣಕ ಯಂತ್ರ ಪ್ರಯೋಗಾಲಯಗಳ ಸ್ಥಾಪನೆ: 2024-25ನೇ ಸಾಲಿನ ಆಯವ್ಯಯ ಘೋಷಿತ ಕಾರ್ಯಕ್ರಮ ಕಂಡಿಕೆ:99(ಬಿ)ರಂತೆ ವಿದ್ಯಾರ್ಥಿಗಳ ಸಂಖ್ಯಾಬಲ ಹೆಚ್ಚಿರುವ ಆಯ್ದ 100 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ 10 ಕೋಟಿ ರೂ ವೆಚ್ಚದಲ್ಲಿ ಗಣಕ ವಿಜ್ಞಾನ ಸಂಯೋಜನೆಗೆ ಅನುಮೋದನೆ ನೀಡಿದ್ದು, ಸದರಿ 100 ಕಾಲೇಜುಗಳಲ್ಲಿ ಲ್ಯಾಬ್ ಹಾಗೂ ಇಂಟರ್‌ನೆಟ್ ವ್ಯವಸ್ಥೆಗಾಗಿ ಪ್ರತಿ ಕಾಲೇಜಿಗೆ ರೂ.40.00 ಲಕ್ಷ ಅನುದಾನವನ್ನು 2024-25ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗಿರುತ್ತದೆ. ಪ್ರತಿ ಕಾಲೇಜಿಗೆ ಒಟ್ಟು 12 All IN ONE DESKTOP ಗಳಂತೆ ಒಟ್ಟು 1200 ಗಣಕಯಂತ್ರಗಳ ಖರೀದಿಗಾಗಿ ಸರ್ಕಾರದ TAP specification ಗಳಂತೆ ಹಾಗೂ KTPP ನಿಯಮದಂತೆ ಟೆಂಡರ್ ಮೂಲಕ ಖರೀದಿಸಲು ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.
- 60 ಆದರ್ಶ ಪದವಿ ಪೂರ್ವ ಕಾಲೇಜುಗಳ ವಿಜ್ಞಾನ ಸಂಯೋಜನೆ ಉನ್ನತೀಕರಣ: ಅಭಿವೃದ್ಧಿ ಆಕಾಂಕ್ಷಿ 60 ತಾಲ್ಲೂಕುಗಳಲ್ಲಿ ವಿಜ್ಞಾನ ಸಂಯೋಜನೆ ಹೊಂದಿರುವ ಆಯ್ದ 60 ಸರಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ದಾಖಲಾತಿ ಹೆಚ್ಚಿಸುವ ಹಾಗು ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಸದರಿ ಕಾಲೇಜುಗಳಲ್ಲಿ ಉತ್ತಮ ಮೂಲಭೂತ ಸೌಕರ್ಯಗಳನ್ನು ಒದಗಿಸುವುದರೊಂದಿಗೆ, ಉತ್ತಮ ಗ್ರಂಥಾಲಯ, ಪ್ರಯೋಗಾಲಯ, ಕಂಪ್ಯೂಟರ್ ಲ್ಯಾಬ್ ಮತ್ತು ಡಿಜಿಟಲ್ ಗ್ರಂಥಾಲಯಗಳ ಬಳಕೆಗಾಗಿ 17 ಕಂಪ್ಯೂಟರ್‌ಗಳನ್ನು ನೀಡಲಾಗಿದೆ. ಸ್ಮಾರ್ಟ್ ಕ್ಲಾಸ್‌ರೂಮ್‌ಗಳು, ನಿರಂತರ ವಿದ್ಯುತ್ ಸಂಪರ್ಕ ವ್ಯವಸ್ಥೆ(UPS) ಮಾಡಲಾಗಿದೆ. ಆನ್‌ಲೈನ್ ಲೈವ್ ತರಗತಿಗಳಿಗೆ ಕಡ್ಡಾಯವಾಗಿ ಹಾಜರಾಗುವಂತೆ ಕ್ರಮ ತೆಗೆದುಕೊಂಡಿದೆ. ಪ್ರತಿ ಕಾಲೇಜಿಗೆ ರೂ.28.00 ಲಕ್ಷಗಳ ಅನುದಾನ ನೀಡಲಾಗಿದೆ.

## ಶಿಕ್ಷಕರ ಲಭ್ಯತೆ

ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕ-ವಿದ್ಯಾರ್ಥಿ ಅನುಪಾತವು ಈ ಕೆಳಗಿನಂತಿದೆ:

| **1 ರಿಂದ 5 ನೇ ತರಗತಿ** | | | |
|---|---|---|---|
| **ದಾಖಲಾತಿ** | **ಶಿಕ್ಷಕರ ಹುದ್ದೆ** | **ಮಲೆನಾಡು ಪ್ರದೇಶ** | **ಭಾಷಾ ಅಲ್ಪಸಂಖ್ಯಾತ ಶಾಲೆಗಳು** |
| 01 to 11 | 1 | 1 | 1+1(ಕನ್ನಡ ಶಿಕ್ಷಕರು) |
| 12 to 60 | 2 | 2 | 2+1 |
| 61 to 90 | 3 | 3 | 3+1 |
| 91 to 120 | 4 | 4 | 4+1 |
| 121 to 150 | 5 | 5 | 5+1 |
| 151 to 180 | 6 | 6 | 6+2 |
| 181 to 210 | 7 | 7 | 7+2 |
| 211 to 240 | 8 | 8 | 8+2 |
| 241ಕ್ಕಿಂತ ಹೆಚ್ಚು | ಅನುಪಾತ 1:30 | ಅನುಪಾತ 1:30 | ಅನುಪಾತ 1:30 |

| **1 ರಿಂದ 7/8 ತರಗತಿಗಳು** | | | |
|---|---|---|---|
| **ದಾಖಲಾತಿ** | **ಶಿಕ್ಷಕರ ಹುದ್ದೆ** | **ಮಲೆನಾಡು ಪ್ರದೇಶದಲ್ಲಿ (60ಕ್ಕಿಂತ ಹೆಚ್ಚು ಮತ್ತು 120ಕ್ಕಿಂತ ಕಡಿಮೆ ದಾಖಲಾತಿ ಇದ್ದಲ್ಲಿ)** | **ಭಾಷಾ ಅಲ್ಪಸಂಖ್ಯಾತ ಶಾಲೆಗಳು** |
| 01 to 11 | 1 | 1 | 1+1(ಕನ್ನಡ ಶಿಕ್ಷಕರು) |
| 12 to 60 | 2 | 2 | 2+1 |
| 61 to 90 | 3 | 3 | 3+1 |
| 91 to 120 | 4 | 4 | 4+1 |
| 121 to 150 | 5 | 5 | 5+1 |
| 151 to 180 | 6 | 6 | 6+2 |
| 181 to 210 | 7 | 7 | 7+2 |
| 211 to 240 | 8 | 8 | 8+2 |
| 241ಕ್ಕಿಂತ ಹೆಚ್ಚು | ಅನುಪಾತ 1:30 | ಅನುಪಾತ 1:30 | ಅನುಪಾತ 1:30 |

| **6 ರಿಂದ 8 ನೇ ತರಗತಿ** | |
|---|---|
| **ದಾಖಲಾತಿ** | **ಹುದ್ದೆ ಮಂಜೂರಾತಿ** |
| 1 to 11 | 1 |
| 12 to 70 | 2 |
| 71 to 105 | 3 (ಮು.ಶಿ) |
| 106 to 140 | 4 |
| 141 to 175 | 5 |
| 176 to 210 | 6 |
| 211 to 245 | 7 |

| | |
|---|---|
| 246 to 270 | 8 |
| 271 ಕ್ಕಿಂತ ಹೆಚ್ಚು | 1:35 ಅನುಪಾತ |

**ವರ್ಷವಾರು ಮಂಜೂರಾದ ಹುದ್ದೆಗಳು**

| ವರ್ಷ | ಮಂಜೂರಾದ ಹುದ್ದೆಗಳು |
|---|---|
| 2025 | 1,88,531 |
| 2024 | 1,88,531 |
| 2023 | 1,88,531 |

ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ 38,667 ಹುದ್ದೆಗಳಲ್ಲಿ 34,027 ಹುದ್ದೆಗಳಿಗೆ ಅತಿಥಿ ಶಿಕ್ಷಕರ ನೇಮಕಕ್ಕೆ ಕ್ರಮವಹಿಸಿದೆ.

**ಪ್ರೌಢಶಾಲಾ ಶಿಕ್ಷಕರ ಹುದ್ದೆಗಳು**

ಸರ್ಕಾರಿ ಪ್ರೌಢ ಶಾಲೆಗಳಲ್ಲಿ ವಿಭಾಗಗಳ ಸಂಖ್ಯೆಯನ್ನು ಆಧರಿಸಿ ಶಿಕ್ಷಕರ ಹುದ್ದೆಗಳನ್ನು ನೀಡಲಾಗುತ್ತದೆ. ವಿಭಾಗ ಮತ್ತು ವಿದ್ಯಾರ್ಥಿಗಳ ಅನುಪಾತ 1:70. ನಾಲ್ಕು ವಿಭಾಗಗಳ ಏಕ ಮಾಧ್ಯಮ ಶಾಲೆಗಳ ಸಿಬ್ಬಂದಿ ಪಟ್ಟಿಯ ಪ್ರಕಾರ, ಮುಖ್ಯೋಪಾಧ್ಯಾಯರನ್ನು ಹೊರತುಪಡಿಸಿ 7 ಹುದ್ದೆಗಳು ಇರಬೇಕು. ಪ್ರಥಮ ಭಾಷೆ-1, ದ್ವಿತೀಯ ಭಾಷೆ-1, ತೃತೀಯ ಭಾಷೆ-1, ಕಲೆ-1, ಗಣಿತ (PCM)-1, ವಿಜ್ಞಾನ (CBZ)-1, ದೈಹಿಕ ಶಿಕ್ಷಣ ಶಿಕ್ಷಕ (ಗ್ರೇಡ್-1) ಹುದ್ದೆ-1 ಅನ್ನು ನಿಗದಿಪಡಿಸಲಾಗಿದೆ. ಏಕ ಮಾಧ್ಯಮವನ್ನು ಹೊಂದಿರುವ ಸರ್ಕಾರಿ ಪ್ರೌಢಶಾಲೆಗಳಲ್ಲಿ, 5 ಅಥವಾ ಹೆಚ್ಚಿನ ವಿಭಾಗಗಳಿದ್ದರೆ, ಪ್ರತಿ ಹೆಚ್ಚುವರಿ ವಿಭಾಗಕ್ಕೆ 1.5 ಶಿಕ್ಷಕರನ್ನು ಒದಗಿಸಲಾಗುತ್ತದೆ.

**ವರ್ಷವಾರು ಮಂಜೂರಾದ ಪ್ರೌಢಶಾಲಾ ಶಿಕ್ಷಕರ ಹುದ್ದೆಗಳು**

| ವರ್ಷ | ಮಂಜೂರಾದ ಹುದ್ದೆಗಳು | ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳು | ಖಾಲಿ ಹುದ್ದೆಗಳು |
|---|---|---|---|
| 2025 | 44,406 | 32,477 | 11,929 |
| 2024 | 44,341 | 34,089 | 10,252 |
| 2023 | 44,341 | 24,186 | 10,155 |

- ರಾಜ್ಯದಲ್ಲಿ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಒಟ್ಟಾರೆ 11,929 ಹುದ್ದೆಗಳಲ್ಲಿ ಖಾಲಿ ಇರುವ ಸಹ ಶಿಕ್ಷಕರ ಖಾಲಿ ಹುದ್ದೆಗಳಿಗೆದುರಾಗಿ 9,499 ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನು ತಾತ್ಕಾಲಿಕವಾಗಿ ಗೌರವಧನ ಆಧಾರದ ಮೇಲೆ ಖಾಯಂ ಹುದ್ದೆ ಭರ್ತಿಯಾಗುವವರೆಗೂ ಅಥವಾ ವರ್ಗಾವಣೆಯಿಂದ ಭರ್ತಿಯಾಗುವವರೆಗೂ ಅಥವಾ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ನೇಮಕ ಮಾಡಿಕೊಳ್ಳಲಾಗಿದೆ.

- 2025-26ನೇ ಸಾಲಿನ ಆಯವ್ಯಯ ಭಾಷಣದ ಘೋಷಣೆಯಂತೆ ಕಲ್ಯಾಣ ಕರ್ನಾಟಕ ಪ್ರದೇಶದ 07 ಜಿಲ್ಲೆಗಳಲ್ಲಿ ಖಾಲಿ ಇರುವ 5,267 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ. ಮುಂದುವರೆದು ಇಲಾಖೆಯಲ್ಲಿ ಇನ್ನೂ ಖಾಲಿ ಇರುವ 5,000 ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುತ್ತಿದೆ.
- ರಾಜ್ಯದ ಅನುದಾನಿತ ಪ್ರೌಢಶಾಲೆಗಳು: ಅನುದಾನಿತ ಪ್ರೌಢ ಶಾಲೆಗಳಲ್ಲಿ ನಿವೃತ್ತಿ, ಮರಣ, ರಾಜೀನಾಮೆ ಹಾಗೂ ಇತರೆ ಕಾರಣಗಳಿಂದ ಜನವರಿ 2016 ರಿಂದ ಮಾರ್ಚ್ 2024ರವರೆಗೆ ಒಟ್ಟು 8,070 ಬೋಧಕ ಹುದ್ದೆಗಳು ಖಾಲಿ ಇರುತ್ತವೆ. ದಿನಾಂಕ:01-01-2016 ರಿಂದ ದಿನಾಂಕ:31- 12-2020 ರವರೆಗೆ ರಾಜ್ಯದ ಅನುದಾನಿತ ಪ್ರೌಢಶಾಲೆ ಮತ್ತು ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ನಿವೃತ್ತಿ, ನಿಧನ, ರಾಜೀನಾಮೆ ಮತ್ತು ಇತರೆ ಕಾರಣಗಳಿಂದ ಖಾಲಿಯಾದ ಬೋದಕ ಹುದ್ದೆಗಳ ನೇಮಕಾತಿಗೆ ಅನುಮತಿ ನೀಡಲಾಗಿರುತ್ತದೆ.

  ಸರ್ಕಾರದ ಆದೇಶದಂತೆ ದಿನಾಂಕ: 31-12-2015 ರ ಪೂರ್ವದಲ್ಲಿ ಖಾಲಿಯಾದ ಸಹ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಲಾಗಿದೆ. ಅದರಂತೆ ಶಾಲಾ ಆಡಳಿತ ಮಂಡಳಿಯಿಂದ ಸ್ವೀಕೃತವಾದ ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ ನೇಮಕಾತಿ ಅನುಮೋದನೆಯನ್ನು ಅನುದಾನ ಸಹಿತವಾಗಿ ನೀಡಲಾಗುತ್ತಿದೆ. ಪ್ರಸ್ತುತ 1,077 ಹುದ್ದೆಗಳ ನೇಮಕಾತಿ ಅನುಮೋದನೆಗೆ ಆಡಳಿತ ಮಂಡಳಿಯಿಂದ ಪ್ರಸ್ತಾವನೆ ಸ್ವೀಕೃತವಾಗದಿರುವುದರಿಂದ ಪ್ರಸ್ತಾವನೆಗಳು ಬಾಕಿ ಇರುತ್ತವೆ. ಪ್ರಸ್ತುತ ಸರ್ಕಾರದ ಆದೇಶದನ್ವಯ ರಾಜ್ಯ ಸಿವಿಲ್ ಸೇವೆಗಳಲ್ಲಿನ ನೇಮಕಾತಿಗಳಲ್ಲಿ ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಅಧಿಸೂಚನೆಗಳನ್ನು ಹೊರಡಿಸುವಂತಿಲ್ಲ ಎಂದು ಸೂಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ಖಾಲಿ ಹುದ್ದೆ ಭರ್ತಿ ಪ್ರಕ್ರಿಯೆಯನ್ನು ಮುಂದಿನ ಆದೇಶದವರೆಗೆ ಸ್ಥಗಿತಗೊಳಿಸಲಾಗಿದೆ.
- ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರ ಲಭ್ಯತೆ: ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಮಂಜೂರಾಗಿರುವ 12,913 ಹುದ್ದೆಗಳಲ್ಲಿ 7,761 ಉಪನ್ಯಾಸಕರು ಕರ್ತವ್ಯ ನಿರ್ವಹಿಸುತ್ತಿದ್ದು, 5,152 ಹುದ್ದೆಗಳು ಖಾಲಿ ಇರುತ್ತವೆ. 2025-26ನೇ ಸಾಲಿನಲ್ಲಿ 5,508 ಅತಿಥಿ ಉಪನ್ಯಾಸಕರ ನಿಯೋಜನೆ ಮಾಡಿಕೊಳ್ಳಲಾಗಿದೆ.

## ಶಿಕ್ಷಕರ ವೃತ್ತಿಪರ ಸಾಮರ್ಥ್ಯಾಭಿವೃದ್ಧಿ

- 2025-26ನೇ ಶೈಕ್ಷಣಿಕ ವರ್ಷದಿಂದ ಕರ್ನಾಟಕದಲ್ಲಿ ಪಾಠ ಆಧಾರಿತ ಮೌಲ್ಯಾಂಕನವನ್ನು (Lesson Based Assessment) ಅಳವಡಿಸುವ ಸಂಬಂಧ ರಾಜ್ಯ ಪಠ್ಯಕ್ರಮದ ಶಾಲೆಗಳ 1 ರಿಂದ 10ನೇ ತರಗತಿಯ ವಿದ್ಯಾರ್ಥಿಗಳ ಕಲಿಕೆಯನ್ನು ಸಾಧಿಸಲು ಹಾಗೂ ಪ್ರತಿ ಪಾಠದ ನಂತರ ಮಗುವಿನ ಕಲಿಕೆಯನ್ನು ದೃಢೀಕರಿಸಲು ಪಾಠ ಆಧಾರಿತ ಮೌಲ್ಯಾಂಕನ ಪ್ರಶ್ನೆಕೋಠಿಯನ್ನು ಸಿದ್ಧಪಡಿಸಿ DSERT Website ನಲ್ಲಿ ಅಳವಡಿಸಲಾಗಿದೆ. ಸದರಿ ಪ್ರಶ್ನೆಕೋಠಿಯನ್ನು ಕಲಿಕಾ ಪ್ರಕ್ರಿಯೆಯಿಂದ ಮೌಲ್ಯಾಂಕನ ಪ್ರಕ್ರಿಯೆಯವರೆಗೆ ಎಲ್ಲಾ ಹಂತದಲ್ಲೂ ನಿರಂತರವಾಗಿ ಬಳಸುವ ಸಂಬಂಧ ಹಾಗೂ ಅನುಷ್ಠಾನ,

ಮೇಲ್ವಿಚಾರಣೆ ಹಾಗೂ ಅನುಪಾಲನೆ ಸಂಬಂಧ ಸುತ್ತೋಲೆ, YouTube Live, VC & Webinar ಗಳ ಮೂಲಕ ಮಾರ್ಗದರ್ಶನ ನೀಡಿದೆ.

- ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಾಜ್ಯ, ಜಿಲ್ಲೆ, ಬ್ಲಾಕ್ ಮತ್ತು ಕ್ಲಸ್ಟರ್ ಹಂತದಲ್ಲಿ FLN ಕೋಶ ಸ್ಥಾಪಿಸಿ ಈ ಮೂಲಕ ಕಾರ್ಯಕ್ರಮಗಳನ್ನು ಅನುಪಾಲನೆ ಮಾಡಲಾಗುತ್ತಿದೆ.
- 2025-26ನೇ ಸಾಲಿನಲ್ಲಿ ಡಯಟ್ ನೋಡಲ್ ಅಧಿಕಾರಿಗಳಿಗೆ 'ಕಂಟೆಂಟ್ ಕ್ಲೀನಿಂಗ್' ಕಾರ್ಯಾಗಾರವನ್ನು ಹಮ್ಮಿಕೊಂಡು DIKSHA ದಲ್ಲಿನ ಕಲಿಕಾಂಶಗಳನ್ನು ಪರಿಶೀಲಿಸಿ, ಪ್ರಸಕ್ತ ಪಠ್ಯಾಧಾರಿತ ಕಲಿಕಾಂಶಗಳನ್ನು ಪಠ್ಯಪುಸ್ತಕದ QR Code ಗಳಿಗೆ ಮ್ಯಾಪಿಂಗ್ ಮಾಡಿಸಲಾಗುತ್ತದೆ.
- ಶಿಕ್ಷಕರಿಗೆ ತಂತ್ರಜ್ಞಾನ ಬಳಕೆ ಸಂಬಂಧ TALP ತರಬೇತಿ ನೀಡಲಾಗಿದ್ದು, ಶಿಕ್ಷಕರು ಅಂತರ್ಜಾಲದಲ್ಲಿ ಇಂದೀಕರಿಸುವ ಜ್ಞಾನ ಹೊಂದಿರುತ್ತಾರೆ.
- ತಂತ್ರಜ್ಞಾನ ಬೆಂಬಲಿತ ಕಲಿಕಾ ಕಾರ್ಯಕ್ರಮ (TALP)ದಲ್ಲಿ ಶಿಕ್ಷಕರಿಗೆ ತರಬೇತಿ ನೀಡಿ ಇ-ಸಂಪನ್ಮೂಲಗಳನ್ನು ಸೃಜಿಸಿ ತರಗತಿಗಳ ಬೋಧನಾ ಕಲಿಕಾ ಪ್ರಕ್ರಿಯೆ ಉತ್ತಮಪಡಿಸಲು ಕ್ರಮವಹಿಸಲಾಗುತ್ತಿದೆ. TALP ಯೋಜನೆಯಡಿ ತಂತ್ರಜ್ಞಾನ ಬಳಕೆಯ ಬಗ್ಗೆ 38,632 ಶಿಕ್ಷಕರಿಗೆ ಇಂಡಕ್ಷನ್ ತರಬೇತಿಯನ್ನು ಹಾಗೂ 9,644 ಶಿಕ್ಷಕರಿಗೆ ರಿಫ್ರೆಷರ್ ತರಬೇತಿಯನ್ನು ನೀಡಲಾಗಿದೆ. 2025-26ನೇ ಸಾಲಿನಲ್ಲಿ TGT ಶಿಕ್ಷಕರು, GPT ಶಿಕ್ಷಕರು, Grade-1 ಮುಖ್ಯಶಿಕ್ಷಕರು ಸೇರಿದಂತೆ ಒಟ್ಟು 20,600 ಶಿಕ್ಷಕರುಗಳಿಗೆ ಇಂಡಕ್ಷನ್ ಮತ್ತು ರಿಫ್ರೆಷರ್ ತರಬೇತಿಯನ್ನು ನೀಡಲು ಕ್ರಮವಹಿಸಲಾಗುತ್ತಿದೆ.
- ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ Digital Skill ಬಳಕೆ ಹಾಗೂ ಕಂಪ್ಯೂಟರ್ ಆಧಾರಿತ ಶಿಕ್ಷಣದ ಅಭಿವೃದ್ಧಿಗೆ ಸಂಬಂಧಿಸಿದಂತೆ ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ತರಬೇತಿಯನ್ನು ನೀಡುವ ಮೂಲಕ ಗುಣಾತ್ಮಕ ಶಿಕ್ಷಣಕ್ಕೆ ಒತ್ತು ನೀಡಲಾಗಿದೆ.
- ದ್ವಿಭಾಷಾ ತರಗತಿಗಳನ್ನು ಪ್ರಾರಂಭಿಸಿರುವ ಶಾಲೆಗಳಲ್ಲಿ ಬೋಧಿಸುತ್ತಿರುವ ಶಿಕ್ಷಕರಿಗೆ EMTIP (English Medium Teachers Induction Programme) 8 ದಿನಗಳ ತರಬೇತಿಯನ್ನು ನೀಡಲಾಗುತ್ತಿದೆ. 2024-25 ನೇ ಸಾಲಿನಲ್ಲಿ 1 ರಿಂದ 6 ನೇ ತರಗತಿಗಳಿಗೆ ಬೋಧಿಸುವ 8,707 ಶಿಕ್ಷಕರಿಗೆ ತರಬೇತಿಯನ್ನು ನೀಡಲಾಗಿದೆ. 2025-26 ನೇ ಸಾಲಿನಲ್ಲಿ 10,260 ಶಿಕ್ಷಕರಿಗೆ ತರಬೇತಿ ನೀಡಲು ಯೋಜಿಸಲಾಗಿದೆ.
- 2024-25ನೇ ಸಾಲಿನಲ್ಲಿ 6ನೇ ತರಗತಿಗೆ ಆಂಗ್ಲ ಮಾಧ್ಯಮ ತರಗತಿಗಳನ್ನು ಪ್ರಾರಂಭಿಸಿದ ಶಾಲೆಯ ಶಿಕ್ಷಕರಿಗೆ ಪ್ರತಿ ಶಾಲೆಗೆ ಇಬ್ಬರು ಶಿಕ್ಷಕರಂತೆ ಒಟ್ಟು 2,002 ಶಿಕ್ಷಕರಿಗೆ ವಿಷಯವಾರು ಇಂಗ್ಲಿಷ್, ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಷಯಗಳಿಗೆ ತರಬೇತಿಯನ್ನು ನೀಡಲಾಗಿದೆ.
- 2023-24ನೇ ಹಾಗೂ 2024-25ನೇ ಸಾಲಿನಲ್ಲಿ 10,051 ಪ್ರೌಢಶಾಲಾ ಶಿಕ್ಷಕರ ವಿಷಯಾಧಾರಿತ ತರಬೇತಿ ನೀಡಲಾಗಿದೆ.
- 2023-24ನೇ ಹಾಗೂ 2024-25ನೇ ಸಾಲಿನಲ್ಲಿ 1,215 ಗಣಿತ ಮತ್ತು ವಿಜ್ಞಾನ ವಿಷಯಗಳ ಪ್ರೌಢ ಶಾಲಾ ಶಿಕ್ಷಕರಿಗೆ ಐಐಎಸ್‌ಸಿ, ಚಳ್ಳಕೆರೆಯಲ್ಲಿ ತರಬೇತಿ ನೀಡಲಾಗಿದೆ.
- 2023-24ನೇ ಹಾಗೂ 2024-25ನೇ ಸಾಲಿನಲ್ಲಿ 25,435 ಶಿಕ್ಷಕರಿಗೆ ಗಣಿತ ಕಲಿಕಾ ಆಂದೋಲನಾ (ಆನ್‌ಲೈನ್) ತರಬೇತಿ ನೀಡಲಾಗಿದೆ.

- 2023-24ನೇ ಹಾಗೂ 2024-25ನೇ ಸಾಲಿನಲ್ಲಿ 27,598 ಶಿಕ್ಷಕರಿಗೆ ಪಿ.ಎ.ಬಿ ಅನುಮೋದಿತ ಸೇವಾನಿರತ ಶಿಕ್ಷಕರ ತರಬೇತಿ (6 ರಿಂದ 10ನೇ ತರಗತಿ) ತರಬೇತಿ ನೀಡಲಾಗಿದೆ.
- 2023-24ನೇ ಹಾಗೂ 2024-25ನೇ ಸಾಲಿನಲ್ಲಿ 32,842 ಶಿಕ್ಷಕರಿಗೆ ಗಣಿತ ಗಣಕ ತರಬೇತಿ ನೀಡಲಾಗಿದೆ.
- 2025-26 ನೇ ಸಾಲಿನಲ್ಲಿ 7 ನೇ ತರಗತಿ ಬೋಧಿಸುವ ಶಿಕ್ಷಕರಿಗೆ ಪ್ರತಿ ಶಾಲೆಗೆ ಇಬ್ಬರು ಶಿಕ್ಷಕರಂತೆ ಒಟ್ಟು 2,002 ಶಿಕ್ಷಕರಿಗೆ ವಿಷಯವಾರು ಇಂಗ್ಲಿಷ್, ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಷಯಗಳಿಗೆ ತರಬೇತಿಯನ್ನು ನೀಡಲಾಗುತ್ತಿದೆ.
- 2025-26 ನೇ ಸಾಲಿನಲ್ಲಿ 27 ಜಿಲ್ಲೆಗಳ ಶಿಕ್ಷಕರಿಗೆ ಮರುಸಿಂಚನ (6 ರಿಂದ 10ನೇ ತರಗತಿಗೆ) ತರಬೇತಿ, ರಾಜ್ಯದ ಎಲ್ಲಾ ಜಿಲ್ಲೆಯ 3 ರಿಂದ 5 ತರಗತಿಗೆ ಗಣಿತ ಬೋಧಿಸುವ ಶಿಕ್ಷಕರಿಗೆ ಗಣಿತ ಗಣಕ ತರಬೇತಿ, ಗಣಿತ ಕಲಿಕಾ ಆಂದೋಲನಾ ತರಬೇತಿ, ಆದಿವಾಸಿ ವಸತಿ ಶಾಲೆಯ ಶಿಕ್ಷಕರಿಗೆ ತರಬೇತಿ, ನಲಿಕಲಿ ತರಬೇತಿ, ಪ್ರೌಢ ಶಾಲಾ ಶಿಕ್ಷಕರಿಗೆ ಗಣಿತ ಮತ್ತು ವಿಜ್ಞಾನ ತರಬೇತಿಯನ್ನು ಐಐಎಸ್‌ಸಿ, ಚಳ್ಳಕೆರೆಯಲ್ಲಿ ನೀಡಲಾಗುವುದು.
- 2025-26ನೇ ಸಾಲಿಗೆ ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ 7 ವಿಷಯಗಳ ಉಪನ್ಯಾಸಕರಿಗೆ "ಜ್ಞಾನ ಸೇತು" ಕಾರ್ಯಕ್ರಮದಡಿಯಲ್ಲಿ ತರಬೇತಿಯನ್ನು ನೀಡಲಾಗುತ್ತಿದೆ.

## 2025-26ನೇ ಸಾಲಿನಲ್ಲಿ SSLC ಫಲಿತಾಂಶ ಸುಧಾರಣೆಗೆ ಕ್ರಮ

2025-26ನೇ ಸಾಲಿನ ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಯ ಫಲಿತಾಂಶ ವೃದ್ಧಿಗಾಗಿ ಅನುಸರಿಸಬೇಕಾದ ಕ್ರಮಗಳ ಕುರಿತು 29 ಅಂಶಗಳ ಸೂಚನೆ ಜಾರಿಯಲ್ಲಿದ್ದು ಜಿಲ್ಲೆಗಳಲ್ಲಿ ಅನುಷ್ಠಾನವಾಗುತ್ತಿದೆ.

- 2024-25ನೇ ಸಾಲಿನಲ್ಲಿ ಪ್ರಕಟವಾಗಿರುವ ಫಲಿತಾಂಶವನ್ನು ವಿಶ್ಲೇಷಿಸಿ ಒಟ್ಟಾರೆಯಾಗಿ ಯಾವ ವಿಷಯದಲ್ಲಿ ಮತ್ತು ಆ ವಿಷಯಗಳ ಯಾವ ನಿರ್ದಿಷ್ಟ ಕಲಿಕಾಂಶಗಳಲ್ಲಿ ಕಡಿಮೆ ಸಾಧನೆ ಆಗಿದೆ ಎಂಬುದನ್ನು ಕಂಡು ಹಿಡಿದು, ಆ ನಿರ್ದಿಷ್ಟ ಕಲಿಕಾಂಶಗಳ ಬೋಧನೆ/ಕಲಿಕೆಗಳ ಕುರಿತು ಅವಶ್ಯ ಕ್ರಮವಹಿಸಲಾಗುತ್ತಿದೆ.
- 10 ನೇ ತರಗತಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಸೇತು ಬಂಧ ಕಾರ್ಯಕ್ರಮವನ್ನು ನಡೆಸಿ, ಆ ಮಕ್ಕಳ ಪ್ರವೇಶ ಕಲಿಕಾಂಶಗಳ ಸಾಧನೆಯನ್ನು ಗುರುತಿಸಿ, ವಿದ್ಯಾರ್ಥಿಗಳಲ್ಲಿ ಸಾಧನೆಯಾಗದ ಕಲಿಕಾಂಶಗಳನ್ನು ಕಲಿಸಲು ಪರಿಹಾರ ಬೋಧನೆ ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ.
- 2025-26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 111 ರಂತೆ ವಿದ್ಯಾರ್ಥಿಗಳು, ಆಯಾ ತರಗತಿಗೆ ತಕ್ಕಂತೆ ಕಲಿಕೆಯ ಮಟ್ಟವನ್ನು ಹೊಂದುವ ನಿಟ್ಟಿನಲ್ಲಿ 111(V) ರಂತೆ ಸರ್ಕಾರಿ ಶಾಲೆಗಳಲ್ಲಿ ಅತೀ ಕಡಿಮೆ ಕಲಿಕಾ ಸ್ತರದಲ್ಲಿರುವ 6 ರಿಂದ 10 ನೇ ತರಗತಿ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ ಹೆಚ್ಚಿಸುವ ಮರುಸಿಂಚನ ಕಾರ್ಯಕ್ರಮವನ್ನು ರಾಜ್ಯಾದ್ಯಂತ ವಿಸ್ತರಿಸಲು ಕ್ರಮವಹಿಸಲಾಗುತ್ತಿದೆ.

- ಶಾಲೆಗಳಲ್ಲಿ ದಾಖಲಾದ ಮಕ್ಕಳು ನಿರಂತರವಾಗಿ ಶಾಲೆಗಳಿಗೆ ಹಾಜರಾಗುವಂತೆ ಕ್ರಮವಹಿಸಲಾಗುತ್ತಿದೆ.
- ಗುಣಮಟ್ಟದ ಫಲಿತಾಂಶ ಪಡೆಯಲು ವಿವಿಧ ಹಂತಗಳಲ್ಲಿ ಪ್ರಗತಿ ಪರಿಶೀಲನಾ ಸಭೆಯನ್ನು ಆಯೋಜಿಸಿ ಕ್ರಮವಹಿಸಲಾಗುತ್ತಿದೆ.
- ಸೇತುಬಂಧ ಮೌಲ್ಯಮಾಪನ ಆಧಾರದ ಮೇಲೆ ಗುರುತಿಸಲ್ಪಟ್ಟ ವಿದ್ಯಾರ್ಥಿಗಳಿಗೆ ವಿಶೇಷ ಬೋಧನಾ ತರಗತಿಗಳನ್ನು ನಡೆಸಲಾಗುತ್ತಿದೆ.
- ಕ್ಲಿಷ್ಟ ಪರಿಕಲ್ಪನೆಗಳನ್ನು ಗುರುತಿಸಿ ವಿದ್ಯಾರ್ಥಿಗಳ ಕಲಿಕೆಯನ್ನು ಅನುಕೂಲಿಸಲು ಶಾಲೆಯ ಅವಧಿಯ ಮೊದಲು ಮತ್ತು ಶಾಲಾ ಅವಧಿಯ ನಂತರ ಶಾಲೆಯಲ್ಲಿಯೇ ವಿಶೇಷ ತರಗತಿಗಳನ್ನು ನಡೆಸಲಾಗುತ್ತಿದೆ.
- ಆಯಾ ತರಗತಿ ನಿರ್ದಿಷ್ಟ ಕಲಿಕಾ ಫಲಗಳನ್ನು ವಿದ್ಯಾರ್ಥಿಗಳು ಸಾಧಿಸುವಂತಾಗಲು ಒಂದನೇ ತರಗತಿಯಿಂದಲೇ ವಿದ್ಯಾರ್ಥಿಗಳ ಕಲಿಕೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ.
- ಫಲಿತಾಂಶವನ್ನು ಉತ್ತಮಪಡಿಸಲು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಶಿಕ್ಷಕರಿಗೆ ಶಾಲಾ ದಿನಗಳನ್ನು ಹೊರತುಪಡಿಸಿ ಪುನಶ್ಚೇತನಾ ತರಬೇತಿಗಳನ್ನು ಆಯೋಜಿಸಲಾಗುತ್ತಿದೆ.

**ಪಿ. ಯು. ಪರೀಕ್ಷಾ ಫಲಿತಾಂಶ ಸುಧಾರಣೆಗೆ ಕ್ರಮಗಳು**

- ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಫಲಿತಾಂಶ ಸುಧಾರಣೆಗೆ ಪೂರಕವಾಗಿ ಶೈಕ್ಷಣಿಕ ಚಟುವಟಿಕೆಗಳ ಮೇಲ್ವಿಚಾರಣೆಗಾಗಿ ಪ್ರಥಮ ಬಾರಿಗೆ "ತಾಲ್ಲೂಕು ಶೈಕ್ಷಣಿಕ ಸಮಿತಿ"ಗಳನ್ನು ರಚಿಸಲಾಗಿದೆ ಸದರಿ ಸಮಿತಿಯಲ್ಲಿ ಒಬ್ಬರು ಪ್ರಾಂಶುಪಾಲರು ಹಾಗೂ ಮೂವರು ಉಪನ್ಯಾಸಕರನ್ನು ಒಳಗೊಂಡಿರುತ್ತದೆ.
- ಎಲ್ಲಾ ವಿಷಯಗಳ ಪ್ರಶ್ನೆ ಕೋಠಿಗಳನ್ನು ಸಿದ್ಧಪಡಿಸಿ ಇಲಾಖೆಯ ಜಾಲತಾಣದಲ್ಲಿ ಅಳವಡಿಸಲಾಗಿರುತ್ತದೆ.
- ಎಲ್ಲಾ ತರಗತಿಗಳಲ್ಲಿ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳನ್ನು ಗುರ್ತಿಸಿ ಪರಿಹಾರಾತ್ಮಕ ತರಗತಿಗಳನ್ನು(Remedial Classes) ಕಡ್ಡಾಯವಾಗಿ ನಡೆಸಲು ಕ್ರಮ ತೆಗೆದುಕೊಂಡಿದೆ.
- ಕಡಿಮೆ ವಿದ್ಯಾರ್ಥಿಗಳಿರುವ ಕಾಲೇಜುಗಳಲ್ಲಿ ಪ್ರಾಂಶುಪಾಲರನ್ನು ಒಳಗೊಂಡಂತೆ ಎಲ್ಲಾ ಉಪನ್ಯಾಸಕರಿಗೂ ವಿದ್ಯಾರ್ಥಿಗಳನ್ನು ಹಂಚಿ, ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗೆ ಕ್ರಮವಹಿಸಲು ತಿಳಿಸಲಾಗಿರುತ್ತದೆ.

**ಸಂಖ್ಯೆ: ಇಪಿ 230 ಯೋಸಕ 2025**

**(ಎಸ್. ಮಧು ಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**